ವೈದ್ಯರ ಕೊರತೆ

741 (1534); ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪೂರ)

(ಅ) ಯಲ್ಲಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಡೆಂಗ್ಯೂ ಜ್ವರ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಇದರ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದಕ್ಕೆ ಬೇಕಾಗಿರುವ ಔಷಧಿಗಳು ಸರ್ಕಾರಿ ಆಸ್ಪತ್ರೆಗಳ ಉಗ್ರಾಣದಲ್ಲಿ ಲಭ್ಯವಿದೆಯೇ;

(ಇ) ತಾಲ್ಲೂಕಿನಲ್ಲಿ ಖಾಲಿಯಿರುವ ವಿವಿಧ ವೈದ್ಯರ ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು;

(ಈ) ವೈದ್ಯರುಗಳ ಕೊರತೆ ನೀಗಿಸಲು ಗುತ್ತಿಗೆ ಆಧಾರದ ಮೇಲೆ ಸ್ಥಳೀಯವಾಗಿ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಬಂದಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಇಲಾಖೆಯಲ್ಲಿನ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ, ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಬಂಧ–1ರಲ್ಲಿ ನೀಡಲಾಗಿದೆ.

ಯಲ್ಲಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ 3 ತಜ್ಞ ವೈದ್ಯರು ಮತ್ತು ಒಬ್ಬರು ದಂತ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

(ಈ) ಗುತ್ತಿಗೆ ಆಧಾರದ ಮೇಲೆ ಎಂ.ಬಿ.ಬಿ.ಎಸ್. ವೈದ್ಯರನ್ನು ನೇಮಕ ಮಾಡಲು ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡ ಲಾಗಿದೆ.

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಸಾಮನ್ಯ ಕರ್ತವ್ಯ ವೈದ್ಯಾಧಿ ಕಾರಿ, ತಜ್ಞ ವೈದ್ಯರು, ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಆಯಾಯ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್. ಹೆಚ್.ಎಂ.) ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವ ಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿ ಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ `60,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

ಕೆ. ಹೆಚ್.ಎಸ್.ಡಿ.ಆರ್.ಪಿ ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತು ಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ `65,000 ಹಾಗೂ `50,000 ದಂತೆ ಗೌರವಧನ ನೀಡಲಾಗುತ್ತಿದೆ, ಮುಂದು ವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ `5000 ದಿಂದ `10000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ` 8000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ` 1000 ದಂತೆ ಗೌರವ ಧನ ನೀಡಲು

ಅವಕಾಶ ಕಲ್ಪಿಸಲಾಗಿದೆ. ಆದರೂ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು, ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

ಎಂ.ಬಿ.ಬಿಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರ ಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

ಭಾರತ ಸಂವಿಧಾನ ಅನುಚ್ಛೇದ 371 ಜೆ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಿಗೆ ಸಂಬಂಧ ಪಟ್ಟ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಇಚ್ಛೆ ಪತ್ರವನ್ನು ಪಡೆದು, ತದನಂತರ ಖಾಲಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಸ್ಥಳೀಯ ವೃಂದ ಮತ್ತು ಮೀಸಲಾತಿ ನಿಯಮಗಳ್ವನಯ ವರ್ಗೀಕರಿಸಿ, ತದನಂತರ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ದಂತ ಆರೋಗ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಹಲವು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಹಾಗೂ ಇತರೆ ಹುದ್ದೆಗಳನ್ನು ಇಲಾಖಾ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಮತ್ತು ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಪಡಿತರ ವಿತರಣೆ

742 (1434) ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

(ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಪಡಿತರ ವಿತರಣೆ ಕೇಂದ್ರಗಳಿವೆ;

(ಆ) ಜನಸಂಖ್ಯಾ ಅನುಗುಣವಾಗಿ ಪಡಿತರ ವಿತರಣೆ ಕೇಂದ್ರಗಳು ಕೆಲಸ ನಿರ್ವಹಿಸುತ್ತಿವೆಯೇ;